ಪ್ರಭಂಜನ ಆಚಾರ್ಯ ಇಪ್ಪತ್ತು ವರ್ಷಗಳ ಹಿಂದೆ ಅದೇ ಆಗ ನೌಕರಿಗೆ ಸೇರಿದ್ದ. ಆ ಆರಂಭದ ದಿನಗಳಲ್ಲಿ ಕಾಲೇಜಿನ ಕ್ಯಾಂಪಸ್‌ನಲ್ಲಿದ್ದ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಕೌಂಟ್ ತೆರೆಯಲೆಂದು ಹೋದವನು ಕ್ಯಾಶ್ ಕೌಂಟರ್‌ನಲ್ಲಿದ್ದ ವಸುಮತಿಗೆ ಮನಸ್ಸು ಒಪ್ಪಿಸಿ, ಒಂದು ವರ್ಷದ ಕಾಲ ಅವಳ ಹಿಂದೆ ಬಿದ್ದು, ಕೊನೆಗೆ ಹಿರಿಯರ ಒಪ್ಪಿಗೆ ಪಡೆದು ತನ್ನ ಪ್ರೀತಿಯನ್ನು ದಾಂಪತ್ಯದಲ್ಲಿ ಪರ್ಯಾವಸಾನಗೊಳಿಸಿದ್ದ. ಬ್ಯಾಂಕಿನ ಕೂಡಿ ಕಳೆಯುವ ಬಿಡುವಿಲ್ಲದ ಕೆಲಸದ ಏಕತಾನತೆಯ ನಡುವೆ ಬಳಲಿ ಬೆಂಡಾಗುತ್ತಿದ್ದ ವಸುಮತಿಗೆ ಬ್ಯಾಂಕಿನ ಕೆಲಸದಾಚೆಯೂ ತನಗೊಂದು ಮನಸ್ಸಿದೆ ಮತ್ತು ಬದುಕಿದೆ ಎನ್ನುವುದು ಅರಿವಿಗೆ ಬರುತ್ತಿದ್ದದ್ದು, ಅವಳ ಮುಖದರ್ಶನದಿಂದಲೇ ಕೃತಾರ್ಥನಾದೆನೇನೋ ಎನ್ನುವಂತೆ ದಿನಕ್ಕೆ ಐದಾರು ಬಾರಿ ಕಾಲೇಜಿನಿಂದ ಬ್ಯಾಂಕಿಗೆ ಅಂಡಲೆಯುತ್ತಿದ್ದ ಪ್ರಭಂಜನನಿಂದ. ಪುಸ್ತಕಗಳೇ ತನ್ನ ಪ್ರಪಂಚವೆಂದು ಭಾವಿಸಿದ್ದ ಪ್ರಭಂಜನ ಮತ್ತು ದಿನಬೆಳಗಾದರೆ ಡೆಬಿಟ್, ಕ್ರೆಡಿಟ್, ಬ್ಯಾಲೆನ್ಸ್‌ಶೀಟ್‌ಗಳಲ್ಲಿ ಮುಳುಗೇಳುತ್ತಿದ್ದ ವಸುಮತಿಯರ ಪರಸ್ಪರ ವಿರುದ್ಧ ಭಾವಗಳ ಹೃದಯದಲ್ಲಿ ಅದುಹೇಗೆ ಪ್ರೇಮ ಪಲ್ಲವಿಸಿತು ಎನ್ನುವುದು ಸೃಷ್ಟಿಕರ್ತ ಬ್ರಹ್ಮನಿಗೇ ಗೊತ್ತು. ಲವ್ ಈಜ್ ಬ್ಲೈಂಡ್ ಎನ್ನುವ ಮಾತು ಇಂಥವರನ್ನು ನೋಡಿಯೇ ಹುಟ್ಟಿಕೊಂಡಿರಬಹುದೆನ್ನುವ ಸಂಶಯ ಅವರಿಬ್ಬರ ಬಂಧುಗಳಲ್ಲಿ ಮತ್ತು ಪರಿಚಿತರಲ್ಲಿ ಒಂದಿಷ್ಟು ದಿನ ಹರಿದಾಡಿ ಕೊನೆಗೆ ಅದೊಂದು ಉತ್ತರ ಸಿಗದ ಪ್ರಶ್ನೆಯಾಗಿಯೇ ಉಳಿದು ಬಿಟ್ಟಿತು.

ಮದುವೆಯಾದ ನಾಲ್ಕು ವರ್ಷದೊಳಗೆ ಕೀರ್ತಿಗೊಂದು ಆರತಿಗೊಂದು ಎನ್ನುವಂತೆ ಎರಡು ಮಕ್ಕಳು ಹುಟ್ಟಿ ಅವರ ದಾಂಪತ್ಯಕ್ಕೆ ಅಧಿಕೃತ ಮುದ್ರೆ ಬಿದ್ದಿತ್ತು. ಇವರಿಬ್ಬರ ಸುಖಸಂಸಾರವನ್ನು ನೋಡಿ ಆನಂದದ ಕಡಲಲ್ಲಿ ತೇಲಾಡಿದ ಅವರವರ ಅಪ್ಪ ಅಮ್ಮ ತಮಗಿನ್ನು ಈ ಲೌಕಿಕ ಬಂಧನ ಸಾಕೆನ್ನುವಂತೆ ಪ್ರಭಂಜನ ಮತ್ತು ವಸುಮತಿಯನ್ನು ಸರ್ವತಂತ್ರ ಸ್ವತಂತ್ರರನ್ನಾಗಿಸಿ ಬೇಗನೆ ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದ್ದರು. ಮಕ್ಕಳ ಲಾಲನೆ, ಪಾಲನೆ, ಅವರ ವಿದ್ಯಾಭ್ಯಾಸ, ತಮ್ಮತಮ್ಮ ಉದ್ಯೋಗದ ಜಂಜಾಟದಲ್ಲಿ ಇಪ್ಪತ್ತು ವರ್ಷಗಳು ಇಪ್ಪತ್ತು ನಿಮಿಷಗಳಂತೆ ಉರುಳಿಹೋಗಿದ್ದವು. ಬೆಂಗಳೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಲ್ಲಿ ಮಗಳು ಪಿಯುಸಿ, ಮಗ ಟೆಂಥ್ ಓದುತ್ತ ಮಕ್ಕಳಿಬ್ಬರೂ ಹಾಸ್ಟೆಲ್ ನಿವಾಸಿಗಳಾದ ಮೇಲೆ, ತಾವಿಬ್ಬರೆ ಇರುವ ಆ ಮನೆಯಲ್ಲಿ ಆರಂಭದ ಕೆಲವು ದಿನಗಳು ಪ್ರಭಂಜನ ಮತ್ತು ವಸುಮತಿ ಈಗಷ್ಟೇ ಮದುವೆಯಾದ ನವವಿವಾಹಿತರೇನೋ ಎನ್ನುವಂತೆ ಹಗಲು ರಾತ್ರಿಯ ಪರಿವೆ ಇಲ್ಲದಂತೆ ಸುಖಿಸಿದ್ದರು. ವಸುಮತಿ ಕಳೆದುಹೋದ ತಾರುಣ್ಯ ತನಗೆ ಮತ್ತೆ ಪ್ರಾಪ್ತವಾದಷ್ಟೆ ಖುಷಿಯಿಂದ ಸಂಭ್ರಮಿಸಿದ್ದಳು.

ಬದುಕು ಯಾವ ಗಳಿಗೆಯಲ್ಲಿ ಯಾವ ತಿರುವು ಪಡೆಯುತ್ತೋ ಯಾರಿಗೆ ಗೊತ್ತು. ಎಲ್ಲವೂ ಸರಿಯಾಗಿದೆ ಎಂದು ಭಾವಿಸಿದ್ದ ವಸುಮತಿಗೆ ಇತ್ತೀಚೆಗೆ ಪ್ರಭಂಜನನ ವರ್ತನೆ ಒಗಟಾಗಿ ಎಲ್ಲವೂ ಅಯೋಮಯ, ಅಗೋಚರವೆನಿಸಿ ಅವನೊಂದು ವಿಚಿತ್ರ ಜೀವಿಯಂತೆ ಅವಳ ಭಾವಕ್ಕೆ ಗೋಚರಿಸಲಾರಂಭಿಸಿದ. ರಾತ್ರಿ ಊಟವಾದ ಮೇಲೆ ಅಡುಗೆ ಮನೆಯಲ್ಲಿನ ಕೆಲಸಕ್ಕೂ ಬಿಡದೆ ತನ್ನನ್ನು ಬೆಡ್‌ರೂಂಗೆ ಬಾ ಎಂದು ಪೀಡಿಸುತ್ತಿದ್ದವನು ಈಗ ಕೆಲವು ದಿನಗಳಿಂದ ಊಟ ಮಾಡಿದ್ದೆ ಕೈಯಲ್ಲಿ ಪುಸ್ತಕ ಹಿಡಿದು ಕೂತಿರುತ್ತಿದ್ದ. ಈ ನಾಲ್ಕು ಗೋಡೆಗಳ ನಡುವೆ ತನ್ನೊಂದಿಗೆ ಬೇರೊಂದು ಜೀವವೂ ಉಸಿರಾಡುತ್ತಿದೆ ಎನ್ನುವುದನ್ನೂ ಮರೆತು, ಗಂಟೆಗಟ್ಟಲೆ ತಪಸ್ಸಿಗೆ ಕುಳಿತವನಂತೆ ಓದಿನಲ್ಲಿ ಕಳೆದುಹೋಗಲಾರಂಭಿಸಿದ. ಪುಸ್ತಕದ ಪುಟಗಳನ್ನು ಮುಗುಚುವುದು, ಪೆನ್ನಿನಿಂದ ಅಲ್ಲಲ್ಲಿ ಗೆರೆಗಳನ್ನು ಎಳೆಯುವುದು, ಒಮ್ಮೊಮ್ಮೆ ಪುಸ್ತಕದಲ್ಲಿನ ಸಾಲುಗಳನ್ನು ಸ್ವಗತದಲ್ಲಿ ಹೇಳಿಕೊಳ್ಳುವುದು ಇಂಥ ದೈಹಿಕ ಚಲನೆಗಳನ್ನು ಬಿಟ್ಟರೆ ಉಳಿದ ವೇಳೆ ವೈರಾಗ್ಯವೇ ಮೈವೆತ್ತು ಅರೆನಿಮಿಲಿತನಾಗಿ ತಪಸ್ಸಿಗೆ ಕುಳಿತ ಬುದ್ಧನಂತೆ ಕಾಣಲಾರಂಭಿಸಿದಾಗ ವಸುಮತಿಗೆ ಭಯ ಶುರುವಾಯಿತು.